ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 01
ಇ-ಮೇಲ್: dir-mines@karnataka.gov.in

ಸಂ: DMG-17012/22/2021/2021-22 ದಿನಾಂಕ: 28.12.2021

ಸಿ.ನಂ: 652857

## ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
## "ಸುಣ್ಣದ ಕಲ್ಲಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ಯ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಆದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಸುಣ್ಣದ ಕಲ್ಲಿನ ಗಣಿ ಗುತ್ತಿಗೆಗಳನ್ನು ನೀಡಲು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಹೊಸ ಪ್ರದೇಶಗಳನ್ನು ಗುರುತಿಸಿದೆ.

ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹರಾಜಿಗೆ ಒಳಪಡಿಸಿದ ಪ್ರದೇಶಗಳ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ಬ್ಲಾಕ್ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) | ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ) |
|---|---|---|---|
| 1 | ದಿಗ್ಗಂವ್ ಸುಣ್ಣದ ಕಲ್ಲಿನ ಬ್ಲಾಕ್ | 786.32 | 812.67 |
| 2 | ಉಡಗಿ ಸುಣ್ಣದ ಕಲ್ಲಿನ ಬ್ಲಾಕ್ | 646.34 | 459.41 |

ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್

ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ-ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ (https://www.mstcecommerce.com/auctionhome/mlcl/index.jsp) ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 28.12.2021 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 07.02.2022 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 17.02.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 17.02.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ನಿರ್ದೇಶಕರು